ಬೆಂಬಲ ಬೆಲೆಯನ್ನು ಘೋಷಣೆ ಮಾಡಿದರೆ ಅವರಿಗೆ ಹೆಚ್ಚಿಗೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ, ಹೆಚ್ಚಿನ ಜನರು ಅದನ್ನು ಬೆಳೆಯುತ್ತಾರೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಸಹಕಾರ ಸಚಿವರು) : (ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ. ಈಗಾಗಲೇ ರೂ. 8,500 ಬೆಂಬಲ ಬೆಲೆಯನ್ನು ಘೋಷಣೆ ಮಾಡಲಾಗಿದೆ ಈ ವರ್ಷದ ಮಾರ್ಚ್‌ನಿಂದ ನವೆಂಬರ್‌ವರೆಗಿನ ಒಂದು average ರೂ. 6,898 ಗೆ ಪ್ರತಿ ಟನ್‌ಗೆ ಮಾರಾಟವಾಗಿದೆ. ಈ ವರ್ಷವೂ ಕೂಡ ಬೆಂಬಲ ಬೆಲೆಯಲ್ಲಿ ತಾಳೆ ಹಣ್ಣನ್ನು ಖರೀದಿ ಮಾಡಲು ಅಧಿಕಾರಿಗಳ ಹಂತದಲ್ಲಿ ಒಂದು ಸಭೆ ನಡೆಯುತ್ತದೆ. ಅದಾದ ಮೇಲೆ ಇದರ ಬಗ್ಗೆ ಸಂಪುಟ ಉಪ ಸಮಿತಿಯಲ್ಲಿ ಚರ್ಚೆ ಮಾಡಿ ಸದ್ಯದಲ್ಲೆ ಹಿಂದೆ ಏನು ರೂ. 8,500 ಖರೀದಿಸಲಾಗಿತ್ತು ಆ ಬೆಲೆಯಲ್ಲಿ ಖರೀದಿ ಮಾಡಲು ಪರಿಶೀಲಿಸಲಾಗುವುದು.

13. ವಿಷಯ : ಬೀದರ್ ಜಿಲ್ಲೆಯಲ್ಲಿನ ಪಿಎಂಸಿ ಕನ್ಸೆಲ್ಟೆನ್ಸಿಯವರ ನಿರ್ಲಕ್ಷತನದಿಂದ ಕಾಮಗಾರಿ ನಿಂತಿದ್ದು ಗುತ್ತಿಗೆಯನ್ನು ರದ್ದು ಮಾಡಿ 3ನೇ ವ್ಯಕ್ತಿಯ ತಪಾಸಣೆಗೆ ಹೊಸಬರನ್ನು ನೇಮಿಸಿ ಕಾಮಗಾರಿಯನ್ನು ಮುಂದುವರೆಸುವ ಬಗ್ಗೆ.

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ : ಮಾನ್ಯ ಅಧ್ಯಕ್ಷರೆ, ಬೀದರ್ ಜಿಲ್ಲೆಯಲ್ಲಿನ ನಗರ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗಾಗಿ ಮುಖ್ಯಮಂತ್ರಿಗಳ ಸಣ್ಣ ಮತ್ತು ಮಧ್ಯಮ ಪಟ್ಟಣ ಅಭಿವೃದ್ಧಿ ಯೋಜನೆಯ ನಗರೋತ್ಥಾನ ಹಂತ–2ರ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಗುತ್ತಿಗೆದಾರರಿಗೆ, ರೂ. 4.00 ಕೋಟಿಗಳಿಗೆ ಕಾಮಗಾರಿಯನ್ನು ನೀಡಿದ್ದಾಗ್ಯೂ ಈ ಕಾಮಗಾರಿಯ ನಿರ್ವಹಣೆ ಸಲಹೆಗಾರರಾದ ಪಿ.ಎಂ.ಸಿ. ಕನ್ಸೆಲ್ಟೆನ್ಸಿಯವರ ನಿರ್ಲಕ್ಷತನದಿಂದ ಕಾಮಗಾರಿ ಸ್ಥಗಿತಗೊಂಡಿರುವುದರಿಂದ ಪಿ.ಎಂ.ಸಿ. ಕನ್ಸೆಲ್ಟೆನ್ಸಿ ಗುತ್ತಿಗೆಯನ್ನು ರದ್ದು ಮಾಡಿ ಮೂರನೇ ವ್ಯಕ್ತಿಯ ತಪಾಸಣೆಗೆ ಹೊಸಬರನ್ನು ನೇಮಿಸಿ ಕಾಮಗಾರಿಯನ್ನು ಮುಂದುವರೆಸುವ ಬಗ್ಗೆ ನಿಯಮ 73ರ ಅಡಿಯಲ್ಲಿ ಗಮನ ಸೆಳೆಯುತ್ತೇನೆ.

ಶ್ರೀ ಖಮರುಲ್ ಇಸ್ಲಾಂ (ವಕ್ಫ್ ಸಚಿವರು) : ಮಾನ್ಯ ಅಧ್ಯಕ್ಷರೆ, ಸಚಿವ ಸಂಪುಟದ ಅನುಮೋದನೆ ಪಡೆದು ನಗರೋತ್ಥಾನ 2ನೇ ಹಂತದ ಯೋಜನೆಯ ಮಾರ್ಗಸೂಚಿಗಳನ್ನು ಸರ್ಕಾರವು ಹೊರಡಿಸಿರುತ್ತದೆ. ಈ ಮಾರ್ಗಸೂಚಿಗಳ ಅನ್ವಯ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ನಗರೋತ್ಥಾನ ಎರಡನೇ ಹಂತದ ಯೋಜನೆಯ ಅನುಷ್ಠಾನಕ್ಕಾಗಿ ಜಿಲ್ಲಾವಾರು ಯೋಜನಾ ಸಮಾಲೋಚಕರನ್ನು ಪೌರಾಡಳಿತ ನಿರ್ದೇಶನಾಲಯದಿಂದ ಟೆಂಡರ್ ಕರೆದು ನೇಮಿಸಲಾಗಿರುತ್ತದೆ. ಅದರಂತೆ ಬೀದರ್ ಜಿಲ್ಲೆಗೆ M/s. Aakar Abhinav Consultant Pvt. Ltd., Navi Mumbai ರವರನ್ನು ಯೋಜನಾ ಸಮಾಲೋಚಕರಾಗಿ (ಪಿ.ಎಂ.ಸಿ) ನೇಮಿಸಲು ದಿನಾಂಕ : 09–11–2012 ರಂದು ನಡೆದ ನಗರೋತ್ಥಾನ 2ನೇ ಹಂತದ ಯೋಜನೆಯ ರಾಜ್ಯ ಮಟ್ಟದ ಸಮಿತಿಯು ಅನುಮೋದನೆ

ನೀಡಿರುತ್ತದೆ. ಪೌರಾಡಳಿ ನಿರ್ದೇಶನಾಲಯವು ದಿನಾಂಕ : 09–11–2012ರಂದು ಸದರಿ ಯೋಜನಾ ಸಮಾಲೋಚಕರಿಗೆ (ಪಿ.ಎಂ.ಸಿ) Letter of Acceptance ನೀಡಲಾಗಿದ್ದು, ದಿನಾಂಕ : 15–12–2012 ರಂದು ಗುತ್ತಿಗೆ ಕರಾರು ಮಾಡಿಕೊಳ್ಳಲಾಗಿದೆ. ಯೋಜನಾ ಸಮಾಲೋಚಕರು ಅಂದಾಜು ಪಟ್ಟಿಗಳನ್ನು ತಯಾರಿಸಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿರುತ್ತಾರೆ. ಸಲ್ಲಿಸಿರುವ ಅಂದಾಜು ಪಟ್ಟಿಗಳಲ್ಲಿ ಬೀದರ್ ಜಿಲ್ಲಾಧಿಕಾರಿಗಳು ನ್ಯೂನ್ಯತೆಗಳನ್ನು ಗುರುತಿಸಿ ಸದರಿ ನ್ಯೂನ್ಯತೆಗಳನ್ನು ಸರಿಪಡಿಸಿ ಕೊಡುವಂತೆ M/s. Aakar Abhinav Consultant Pvt. Ltd., Navi Mumbai ರವರನ್ನು ಕೋರಿರುತ್ತಾರೆ, ಯೋಜನಾ ಸಮಾಲೋಚಕರು ಅಂದಾಜು ಪಟ್ಟಿಗಳ ನ್ಯೂನ್ಯತೆಗಳನ್ನು ಸರಿಪಡಿಸಲು ವಿಳಂಬವಾದ ಹಿನ್ನಲೆಯಲ್ಲಿ ಬೀದರ್ ಜಿಲ್ಲಾಧಿಕಾರಿಗಳು ನಗರಸ್ಥಳೀಯ ಸಂಸ್ಥೆಯ ಮತ್ತು ಜಿಲ್ಲಾ ನಗರಾಭಿವೃದ್ಧಿ ಕೋಶದ ಇಂಜಿನೀಯರ್‌ಗಳನ್ನು ನಿಯೋಜಿಸಿ ಅಂದಾಜುಗಳನ್ನು ತಯಾರಿಸಿ, ಕಾಮಗಾರಿಗಳ ಅನುಷ್ಠಾನಕ್ಕೆ ಕ್ರಮವಹಿಸಿರುತ್ತಾರೆ.

ಬೀದರ್ ಜಿಲ್ಲಾಧಿಕಾರಿಗಳು ಜಿಲ್ಲೆಯ 6 ನಗರ ಸ್ಥಳೀಯ ಸಂಸ್ಥೆಗಳ ರೂ. 5816 ಲಕ್ಷಗಳ ಜಿಲ್ಲಾ ಪ್ಯಾಕೇಜ್‌ನ ಟೆಂಡರ್ ಪ್ರಕಟಣೆಯನ್ನು ದಿನಾಂಕ : 02–02–2013 ರಂದು ನೀಡಿರುತ್ತಾರೆ. ನಗರಾಭಿವೃದ್ಧಿ ಇಲಾಖೆಯ ಆದೇಶ ಸಂಖ್ಯೆ : ನಅಇ 122 ಸಮಸ 2013, ದಿನಾಂಕ : 30–11–2013ರ ಆದೇಶದಲ್ಲಿ M/s RMN Infrastructure Ltd., Hyderbad ರವರಿಗೆ ರೂ. 60,77,34,119.21 ರ ಮೊತ್ತಕ್ಕೆ ಅನುಮೋದನೆ ನೀಡಿರುತ್ತದೆ. ಜಿಲ್ಲಾಧಿಕಾರಿಗಳು ಬೀದರ್ ಜಿಲ್ಲೆರವರು ದಿನಾಂಕ : 26–02–2014 ರಂದು M/s RMN Infrastructure Ltd., Hyderbad ರವರೊಂದಿಗೆ ಗುತ್ತಿಗೆ ಕರಾರು ಮಾಡಿಕೊಂಡು ದಿನಾಂಕ : 28–02–2014 ರಂದು ಕಾರ್ಯಾದೇಶವನ್ನು ಸಹ ನೀಡಿರುತ್ತಾರೆ.

ದಿನಾಂಕ : 09–10–2014ರಂದು ಮಾನ್ಯ ಪೌರಾಡಳಿತ ಮತ್ತು ಸಾರ್ವಜನಿಕ ಉದ್ದಿಮೆ, ಅಲ್ಪ ಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು, ಅಧ್ಯಕ್ಷತೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನ ಹಾಗೂ ಹಿರಿಯ ನಾಗರೀಕ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಜ್ಯ ಸಚಿವರು ಹಾಗೂ ಬೀದರ್ ಜಿಲ್ಲೆಯ ಉಸ್ತುವಾರಿ ಸಚಿವರು, ಬೀದರ್ ವಿಧಾನಸಭಾ ಕ್ಷೇತ್ರ (ದಕ್ಷಿಣ) ದ ಶಾಸಕರು, ಜಿಲ್ಲಾಧಿಕಾರಿಗಳು, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನ ನಿರ್ದೇಶಕರು, ಬೀದರ್ ಜಿಲ್ಲಾ ನಗರೋತ್ಥಾನ 2ನೇ ಹಂತದ ಯೋಜನೆಯ ಯೋಜನಾ ಸಮಾಲೋಚಕರು ಮತ್ತು ಗುತ್ತಿಗೆದಾರರೊಂದಿಗೆ ನಡೆದ ಸಭೆಯಲ್ಲಿ ಯೋಜನಾ ಸಮಾಲೋಚಕರಾದ M/s. Aakar Abhinav Consultant Pvt. Ltd., Navi Mumbai ರವರನ್ನು ಯೋಜನಾ ಸಮಾಲೋಚಕರ ಸೇವೆಯನ್ನು ಕಾಮಗಾರಿ ನಿರ್ವಹಣೆ Construction Supervision ಸೇವೆಗಳಿಗೆ

ಸೀಮಿತಗೊಳಿಸಿ ಮುಂದುವರೆಸುವ ಬಗ್ಗೆ ಬೀದರ್ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಸಭೆಯಲ್ಲಿ ಮಂಡಿಸಿ ಸೂಕ್ತ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಹಾಗೂ ಪೌರಾಡಳಿತ ನಿರ್ದೇಶನಾಲಯದಲ್ಲಿ ಪರಿಷ್ಕೃತ ಗುತ್ತಿಗೆ ಕರಾರನ್ನು ಮಾಡಿಕೊಂಡು ಯೋಜನಾ ಸಮಾಲೋಚಕರ ಸೇವೆಯನ್ನು ಮುಂದುವರೆಸಿ ಬೀದರ್ ಜಿಲ್ಲೆಯ ನಗರೋತ್ಥಾನ ಎರಡನೇ ಹಂತದ ಯೋಜನೆಯ ಕಾಮಗಾರಿಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ತೀರ್ಮಾನಿಸಲಾಗಿರುತ್ತದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಹಾಗೂ ಬೀದರ್ ಜಿಲ್ಲೆಯ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ : 24–11–2014 ರಂದು ನಡೆದ ಸಭೆಯಲ್ಲಿ ದಿನಾಂಕ : 15–11–2014ರಂದು ಮಾನ್ಯ ಪೌರಾಡಳಿತ ಸಚಿವರ ಅಧ್ಯಕ್ಷತೆಯಲ್ಲಿ ಬೀದರ್ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ನಡೆದ ಸಭೆಯ ತೀರ್ಮಾನದಂತೆ ಈಗಾಗಲೇ ಸರ್ಕಾರದಿಂದ ನೇಮಿಸಲಾದ ಪಿ.ಎಂ.ಸಿ.ರವರನ್ನು ಮುಂದುವರೆಸಿ ಮಂಜೂರಾದ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ತೀರ್ಮಾನಿಸಲಾಗಿರುತ್ತದೆ. ಈ ಬಗ್ಗೆ ಜಿಲ್ಲಾಧಿಕಾರಿಗಳು ದಿನಾಂಕ : 28–11–2014ರ ಪತ್ರದಲ್ಲಿ ದಿನಾಂಕ : 24–11–2014ರ ಸಭೆಯ ನಡವಳಿಗಳಂತೆ ಕ್ರಮವಹಿಸಲು ಸರ್ಕಾರದ ಆದೇಶ ಕೋರಿರುತ್ತಾರೆ.

ನಗರೋತ್ಥಾನ 2ನೇ ಹಂತದ ಯೋಜನೆಯಲ್ಲಿ ಗುತ್ತಿಗೆದಾರರು ರೂ. 170 ಲಕ್ಷಗಳ ಕಾಮಗಾರಿಗಳನ್ನು ಪೂರ್ಣಗೊಳಿಸಿರುತ್ತಾರೆ ಮತ್ತು ಪೂರ್ಣಗೊಳಿಸಿದ ಕಾಮಗಾರಿಯ ಕೆಲಸಕ್ಕೆ ಪಿ.ಎಂ.ಸಿ.ರವರು ಮೂರನೇ ಪಾರ್ಟಿ ಹಾಗೂ ಗುಣ ನಿಯಂತ್ರಣ ವರದಿಗಳನ್ನು ಸಲ್ಲಿಸದೇ ಇರುವ ಕಾರಣ ಗುತ್ತಿಗೆದಾರರಿಗೆ ಹಣ ಪಾವತಿ ಮಾಡುವುದು ಬಾಕಿ ಇರುತ್ತದೆ ಎಂದು ಬೀದರ್ ಜಿಲ್ಲಾಧಿಕಾರಿಗಳು ದಿನಾಂಕ : 12–12–2014ರ ಪತ್ರದಲ್ಲಿ ವರದಿ ಮಾಡಿರುತ್ತಾರೆ.

ಬೀದರ್ ಜಿಲ್ಲಾಧಿಕಾರಿಗಳು ದಿನಾಂಕ : 12–12–20214ರ ಪತ್ರದಲ್ಲಿ ಪಿಎಂಸಿರವರು ಬೀದರ್ ಜಿಲ್ಲೆಗೆ ಬಂದು ನಗರೋತ್ಥಾನ 2ನೇ ಹಂತದ ಕಾಮಗಾರಿಗಳ ಪರಿವೀಕ್ಷಣೆ ಮಾಡಲು ಆಸಕ್ತಿ ತೋರಿಸುತ್ತಿಲ್ಲ ಹಾಗೂ ಬೀದರ್ ಜಿಲ್ಲೆಯ ನಾಗರೀಕರಿಗೆ ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿ ಸಾಕಷ್ಟು ತೊಂದರೆಗಳನ್ನು ಅನುಭವಿಸುತ್ತಿದ್ದು, ಸಾರ್ವಜನಿಕರು ಸಾಕಷ್ಟು ಸಲ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಧರಣಿ ನಡೆಸಿ ರಸ್ತೆ ರೋಖಾ ಸಹ ಮಾಡಿರುತ್ತಾರೆ ಎಂದು ವರದಿ ಮಾಡಿರುತ್ತಾರೆ. ಪಿಎಂಸಿ ರವರ ಕಾರ್ಯ ವೈಖರಿ ಸರಿ ಇಲ್ಲದ ಕಾರಣ ಜಿಲ್ಲೆಯಲ್ಲಿ ಇಷ್ಟೆಲ್ಲಾ ಅನಾಹುತಗಳು ಸಂಭವಿಸುತ್ತಿರುವ ಕಾರಣ ನಗರೋತ್ಥಾನ 2ನೇ ಹಂತದ ಯೋಜನೆಯಲ್ಲಿ ಈಗಾಗಲೇ ಕೈಗೆತ್ತಿಕೊಂಡಿರುವ ಮುಂದೆ ಕೈಗೆತ್ತಿಕೊಳ್ಳಲಾಗುವ ಕಾಮಗಾರಿಗಳ ಕೆಲಸದ ಗುಣಮಟ್ಟ ಮತ್ತು ಅನ್ಯ ತಂಡ ತಪಾಸಣೆ ವರದಿಯನ್ನು ಸಲ್ಲಿಸಲು ಸ್ಥಳೀಯವಾಗಿ ನೇಮಕ ಮಾಡಿಕೊಳ್ಳಲು ಅನುಮೋದನೆ

ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸರ್ಕಾರವು ಜಿಲ್ಲಾಧಿಕಾರಿಗಳ ಪ್ರಸ್ತಾವನೆಯನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮಕೈಗೊಂಡು ಕಾಮಗಾರಿ ಅನುಷ್ಠಾನಕ್ಕೆ ಅಗತ್ಯ ಕ್ರಮ ವಹಿಸಲಿದೆ.

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನಗರೋತ್ಥಾನ ಹಂತ–2 ರೂ. 65 ಕೋಟಿಗಳ ಕಾಮಗಾರಿಗೆ ಹೋದ ವರ್ಷ ಅಕ್ಟೋಬರ್ ತಿಂಗಳಿನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಬಂದು ಶಿಲಾನ್ಯಾಸವನ್ನು ಮಾಡಿದ್ದಾರೆ. ಈಗಾಗಲೇ ಈ ಕಾಮಗಾರಿ ಟೆಂಡರ್ ಗುತ್ತಿಗೆದಾರರಿಗೆ ಕೊಟ್ಟಿದ್ದಾರೆ, ಆತ 4–5 ಕೋಟಿ ರೂಪಾಯಿಗಳ ಕಾಮಗಾರಿಯನ್ನು ಕೂಡ ಮಾಡಿದ್ದಾನೆ, 6 ತಿಂಗಳಿಂದ ಕಾಮಗಾರಿ ನಿಂತು ಹೋಗಿದೆ. ಅದಕ್ಕೆ ಕಾರಣವೇನೆಂದರೆ, ಹಿಂದಿನ ಸರ್ಕಾರದ ಅವಧಿಯಲ್ಲಿ ಬೆಂಗಳೂರು ಮಟ್ಟದಲ್ಲಿ PMC Consultants ಎನ್ನುವ ಯೋಜನ ಸಮಾಲೋಚಕರಿಗೆ ಅವರು ಗುತ್ತಿಗೆ ಕೊಟ್ಟಿದ್ದಾರೆ, ಆತ ಬೀದರ್ ಜಿಲ್ಲೆಯಲ್ಲಿ ಏನೂ ಕೆಲಸ ಮಾಡಿಲ್ಲ. ನಾನು ಕೇಳುವ ಕ್ಲಾರಿಫಿಕೇಷನ್ ಏನೆಂದರೆ, ಜಿಲ್ಲಾಧಿಕಾರಿಯವರು ಅವರಿಗೆ ಹಣ ಕೊಡಬೇಡಿ ಎಂದು ಹೇಳಿದ್ದರು, ಅವನಿಗೆ ಏನೂ ಕೆಲಸ ಮಾಡದೆ ಏಕೆ ಹಣ ಕೊಡಲಾಗಿದೆ ? ಅವರು ಅಂದಾಜು ಪಟ್ಟಿ ಕೊಟ್ಟಿಲ್ಲ. ನಾನು ಕೇಳುವ clarification ಏನೆಂದರೆ, ಜಿಲ್ಲಾಧಿಕಾರಿ ಅವನಿಗೆ ದುಡ್ಡು ಕೊಡಬಾರದು ಎಂದು ಹೇಳಿದ್ದರು. ಅವನು ಏನೂ ಕೆಲಸ ಮಾಡದೆ ಅವನಿಗೆ ಏಕೆ ದುಡ್ಡು ಕೊಡಲಾಗಿದೆ ? ಇಲ್ಲಿಯವರೆಗೆ ಕೆಲಸ ಮಾಡದೆ ಇದ್ದ ಕಾರಣ ಕಾಮಗಾರಿ ಒಂದೂವರೆ ವರ್ಷದಿಂದ ಸ್ಥಗಿತಗೊಂಡಿದೆ. ಈಗ escalation ಆಗಿ ಸರ್ಕಾರದ ಮೇಲೆ ಹೆಚ್ಚಿನ ಹೊರೆ ಬೀಳುತ್ತದೆ. ಗುತ್ತಿಗೆದಾರರು ಕೇಳುತ್ತಿದ್ದಾರೆ. ಆರು–ಆರು ತಿಂಗಳಿನಿಂದ ಹಾಗೆಯೇ ನೆನೆಗುದಿಗೆ ಬಿದ್ದಿದೆ. ಜನ ನಮಗೆ ಕೇಳುತ್ತಿದ್ದಾರೆ. ಮುಜುಗರವಾಗುತ್ತಿದೆ. ಶಿಲಾನ್ಯಾಸವಾಗಿದೆ, ಕೆಲಸ ಆಗುತ್ತಿಲ್ಲ. ತಕ್ಷಣ ಅವನ ಕಾಮಗಾರಿ ರದ್ದುಗೊಳಿಸಿ third party ಮತ್ತೊಬ್ಬರಿಗೆ ನೇಮಕ ಮಾಡುವುದಕ್ಕೆ ಏನು ತೊಂದರೆ ಇದೆ ? ನಾವು ಇನ್ನು ಪರಿಶೀಲನೆ ಮಾಡುತ್ತೇವೆ, ನಿಯಮಾನುಸಾರ ಕ್ರಮ ತೆಗೆದುಕೊಳ್ಳುತ್ತೇವೆಂದರೆ ಹೇಗೆ ? ಮಾನ್ಯ ಸಚಿವರಲ್ಲಿ ನನ್ನ ಮನವಿ ಏನೆಂದರೆ, consultants ಯಾರು ಮುಂಬೈ ಬೆಂಗಳೂರಿನವರು ಇದ್ದಾರೆ, ಅವರು ರಾಜ್ಯ ಲೂಟಿ ಮಾಡುತ್ತಿದ್ದಾರೆ ಇವರನ್ನು ರದ್ದುಗೊಳಿಸಿ 3rd party ಬೇರೆಯವರಿಗೆ ತಪಾಸಣೆ ಮಾಡುವವರಿಗೆ ನಿಯುಕ್ತ ಮಾಡಿ ಕೆಲಸ ಪ್ರಾರಂಭ ಮಾಡಿಸಿ.

SRI QAMARUL ISLAM : This work was already started and Hon'ble Chief Minister has laid the foundation.

HON'BLE SPEAKER : ಆಯ್ತು There is a delay.

SRI QAMARUL ISLAM : abount 4 crore work has already been carried out by the contractor. PMC was selected by tender approved by the DMA and the then cabinet. And then accordingly the work was also started and the contractor was also there. In the meantime what has happened is that there was a difference between the Deputy Commissioner and the PMC The Deputy Commissioner had asked to do some ratification in the technicalities. Then the madam incharge and all MLA's who are the member of the committee of district had a meeting and fixed the third party. Third party has come in the way. So, the differences started. I had held the meeting in the last month in my chamber along with the district incharge Minister Madam and the members and the Deputy Commissioner and the DMA and the Secretary and all. I assure in the House that we will see that as per the procedure the work will start and some decision will be taken. Already proceedings have been made.

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ : ಮಾನ್ಯ ಅಧ್ಯಕ್ಷರೆ, ಆರು ತಿಂಗಳಿಂದ ..

ಅಧ್ಯಕ್ಷರು : ಚರ್ಚೆಗೆ ಬೇರೆ ರೂಪದಲ್ಲಿ ಕೇಳಿ.

14. ವಿಷಯ : ಮೂಡಿಗೆರೆ ವಿಧಾನಸಭಾ ಕ್ಷೇತ್ರದ ಕಳಸಾ ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರು ಒದಗಿಸುವ ಬಗ್ಗೆ

ಶ್ರೀ ಬಿ.ಬಿ. ನಿಂಗಯ್ಯ (ಮೂಡಿಗೆರೆ) : ಮಾನ್ಯ ಅಧ್ಯಕ್ಷರೆ, ಮೂಡಿಗೆರೆ ವಿಧಾನಸಭಾ ಕ್ಷೇತ್ರದ ಕಳಸಾ ಪಟ್ಟಣಕ್ಕೆ ಶಾಶ್ವತವಾಗಿ ಕುಡಿಯುವ ನೀರನ್ನು ಒದಗಿಸತಕ್ಕಂತಹ NRDWP ಯೋಜನೆ ಅಡಿಯಲ್ಲಿ ಕಾಮಗಾರಿ ಪ್ರಾರಂಭವಾಗಿ ಐದು ವರ್ಷಗಳಾಗಿದೆ. ಆದರೆ ಇವತ್ತಿನವರೆಗೂ ಪೂರ್ಣವಾಗಿಲ್ಲ, ಜನರಿಗೆ ನೀರು ಕೊಡತಕ್ಕಂತಹ ಉದ್ದೇಶ ಈಡೇರಿಲ್ಲ. ಈ ಬಗ್ಗೆ ಮಾನ್ಯ ಸಚಿವರ ಗಮನ ಸೆಳೆಯುವುದಕ್ಕೆ ಬಯಸುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ಮೂಡಿಗೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕಳಸ ಪಟ್ಟಣಕ್ಕೆ ಶಾಶ್ವತ ಕುಡಿಯುವ